ಬುಡಪ್ಪ? ದೇವ್ರು ನಿಂಗೀಗ ಏನ್ ಕಮ್ಮಿ ಮಾಡವ್ನೆ?' ಅಂದಳು. 'ಇವತ್ಗೆ ನಮ್ಗೆ ಈ ಊರಿನ್ ರುಣ ತೀರ್ತು ಕಣ್ಣವ್ವಾ,' ಅಂದ ಬಾಲ್ರಾಜ ಬಿಕ್ಕಳಿಸುತ್ತಾ.

ಹಿಂಗೆ ಸುಮಾರು ಹೊತ್ತು ಅವ್ವ ಮಗನ ನಡುವೆ ನಡೆದ ಮಾತುಕತೆಗಳ ಫಲಿತವಾಗಿ ನಾಳೆಯೇ ಇಬ್ಬರೂ ಆ ಊರನ್ನು ಬಿಡಬೇಕೆಂದೂ ಈಗಿರುವ ಮನೆ ಹಾಗೂ ತೋಟವನ್ನು ಪಂಚ್ಲಿಂಗಪ್ಪನಿಗೇ ಕೊಟ್ಟುಬಿಡಬೇಕು ಎಂಬ ತೀರ್ಮಾನ ಅಂತಿಮವಾಗಿತ್ತು. ಸಂಪಕ್ಕಜ್ಜಿ ಅತ್ತೂ ಕರೆದು ಮಗನನ್ನು ಇನ್ನಿಲ್ಲದಂತೆ ಒಪ್ಪಿಸಲು ನೋಡಿ ಸೋತು ಕಡೆಗೆ, 'ಊರು ವೋಗು ಅಂತಾಯ್ತು ಕಾಡು ಬಾ ಅಂತಾಯ್ತು, ಎಲ್ಲಿದ್ರೇನು ನಡ್ಯಪ್ಪ,' ಅಂದಿದ್ದಳು. ಬಾಲ್ರಾಜನಿಗೆ ರಾತ್ರಿ ಎಷ್ಟು ಹೊತ್ತಾದರೂ ನಿದ್ದೆ ಹತ್ತಲೇ ಇಲ್ಲ. ಪಡಸಾಲೆಯಲ್ಲಿ ಮಲಗಿದ್ದ ಡ್ರೈವರ್‌ನ ಗೊರಕೆಗಳನ್ನುಳಿದು ಇಡೀ ಮನೆ ಮೌನದ ಸುಪರ್ದಿನಲ್ಲಿತ್ತು.

ಮಗನ ಇನ್ನಿಲ್ಲದ ಒತ್ತಾಯಕ್ಕೆ ಹೂಗುಟ್ಟಿದ್ದ ಸಂಪಕ್ಕಜ್ಜಿಯೂ ತಳಮಳಕ್ಕೊಳಗಾಗಿದ್ದಳು. 'ನಾನು ಬರೋದೇ ಇಲ್ಲ ಹೋಗು' ಅಂತ ಹೇಳಿದ್ರೆ ಮಗ ಮಾಡಿಕೊಳ್ಳಬಹುದಾದ ಬೇಜಾರದ ಬಗ್ಗೆಯೂ ಯೋಚಿಸಿ ಯೋಚಿಸಿ ಸಂದಿಗ್ಧದಲ್ಲಿ ಸಿಕ್ಕಿದ್ದಳು. ಹಿಂಗೆ ಒಂದು ದಿನ ಇದ್ದಕ್ಕಿದ್ದಂತೆ ಊರು ಬಿಡಲೇಬೇಕಾಗಿ ಬರುತ್ತೆ ಅಂತ ಕನಸು ಮನಸಿನಲ್ಲೂ ಅಂದುಕೊಂಡಿರದಿದ್ದ ಸಂಪಕ್ಕಜ್ಜಿ ಚಣಚಣಕ್ಕೂ ಹೇಳಿಕೊಳ್ಳಲಾಗದ ಆತಂಕವನ್ನು ಹತ್ತಿಕ್ಕಲಾಗದೆ ಚಡಪಡಿಸತೊಡಗಿದಳು. ಗಂಡ ಪಲಾರ್ದಯ್ಯ ಮಗಳು ರುಕುಮಿ ಮತ್ತತ್ತೆ ಕಣ್ಮುಂದೆ ನಿಲ್ಲುತ್ತಾ ಎದೆ ಭಾರವಾಗತೊಡಗಿತು. ಇಡೀ ಮನೆ ಕತ್ತಲ ಕುಪ್ಪೆಯಂತೆ ಭಾಸವಾಗತೊಡಗಿತು. ಮಲಗಿದ್ದ ಮಂಚದ ಮೇಲಿಂದ ಎದ್ದು ಕೂತಳು. ಅಷ್ಟರಲ್ಲಿ ಎದುರಿನ ರೂಮಿಂದ ಬಾಲ್ರಾಜ ಎದ್ದು ಬರುತ್ತಿರುವ ಹೆಜ್ಜೆಗಳ ಸದ್ದು ಕೇಳಿಸಿ ಪುಸುಕ್ಕನೇ ಮತ್ತೆ ಹಂಗೇ ಹಾಸಿಗೆಯಲ್ಲಿ ಉಲ್ಡಿಕೊಂಡಳು.

ಎಷ್ಟು ವಿನೀತನಾದರೂ ನಿದ್ದೆ ಎಂಬೋದು ತೋರುತ್ತಿದ್ದ ಗಾಂಚಾಲಿಗೆ ಬೇಸತ್ತು ಬಾಲ್ರಾಜ ಮಲಗಿದ್ದಲ್ಲಿಂದ ಎದ್ದು ಆಚೆ ಹೋಗಿ ಅಂಗಳದಲ್ಲಿ ನಿಂತ. ಚಂದ್ರನ ಬೆಳಕು ದೀಡಾಗುತ್ತಿತ್ತು. ತಾನು ನಿಂತಿದ್ದಲ್ಲಿಂದ ಎಡಕ್ಕಿದ್ದ ತೋಟದ ಕಡೆಗೆ ಹೋಗಿದ್ದ ದಾರಿಯನ್ನೇ ದಿಟ್ಟಿಸಿದ. ದಾರಿಯ ಇಕ್ಕೆಲಗಳಲ್ಲೂ ಬೆಳೆದಿದ್ದ ಕಳ್ಳಿಬೇಲಿ, ಅದರಾಚೆಗೆ ಕಾಣುತ್ತಿದ್ದ ಬೆಲವತ್ತದ ಮರ, ಹೊಸದಾಗಿ ಸೈಕಲ್ ಕಲಿತ ದಿನಗಳಲ್ಲಿ ಚಕ್ಕನೆ ತಿರುಗಿಕೊಂಡು ಹೋಗುತ್ತಿದ್ದ ದಾರಿಯ ಆ ತಿರುವು, ಜೊತೆಗೆ ಅದೇ ತಿರುವಿನಲ್ಲಿ ಅಪ್ಪ ತಂಗಿಯೊಂದಿಗೆ ತನ್ನನ್ನೂ ಸೈಕಲ್ಲಿನಲ್ಲಿ ಕೂರಿಸಿಕೊಂಡು ಬರುತ್ತಿದ್ದ ಆ ಚಿತ್ರ... ಒಂದೊಂದಾಗಿ ಕಣ್ಮುಂದೆ ಬರುತ್ತಲೇ ಬಾಲ್ರಾಜ ಅಪಾರ ಸಂಕಟಕ್ಕೊಳಗಾದ. ಅದರ ಬಿರುವು ತಮಣೆಯಾಗುವವರೆಗೂ ಅವನು ನಿಂತಲ್ಲೇ ನಿಂತಿದ್ದ.

ಆಚೆ ಹೋದ ಮಗ ಎಷ್ಟೊತ್ತಾದರೂ ಒಳ ಬಾರದ್ದರಿಂದ ಎದ್ದು ಹೋಗಿ ನೋಡುವ ಮನಸ್ಸಾಯ್ತು ಸಂಪಕ್ಕಜ್ಜಿಗೆ. ಅಷ್ಟರಲ್ಲಿ ಬಾಲ್ರಾಜ ಒಳ ಬಂದ ಸುಳಿವು ಸಿಕ್ಕಿ ಮತ್ತೆ ಎದ್ದು ಕೂತು ಕತ್ತಲಲ್ಲಿ ಸುತರಾಂ ಏನೂ ಕಾಣದಿದ್ದರೂ ಒಮ್ಮೆ ರೂಮಿನ ಬಾಗಿಲ ಮೇಲಿನ ಗೋಡೆಯಲ್ಲಿದ್ದ ಗಂಡ ಪಲಾರ್ದಯ್ಯನ ಪಟದತ್ತಲೂ ಮತ್ತೊಮ್ಮೆ ಅದರ ಎದುರು ಗೋಡೆಯಲ್ಲಿದ್ದ ಮಗಳು ರುಕುಮಿಯ ಪಟದತ್ತಲೂ ಬಿಟ್ಟೂ ಬಿಟ್ಟು ದಿಟ್ಟಿಸತೊಡಗಿದಳು. 'ಅಯ್ಯೋ, ನಿಮ್ಮನ್ನೆಲ್ಲಾ ಇಲ್ಲಿ ಇಂಗೆ ಬಿಟ್ಟುಬಿಟ್ಟು ನಾನು...' ಸಂಪಕ್ಕಜ್ಜಿ ಮೆಲ್ಲಗೆ ಬಿಕ್ಕಳಿಸಹತ್ತಿದಳು. ಅವಳ ಆ ಬಿಕ್ಕಳಿಕೆಗಳು ಮುಚ್ಚಿದ್ದ ರೂಮಿನ ಬಾಗಿಲಿನಿಂದಾಚೆ ದೇಗಲಾರದೆ ಅಲ್ಲಲ್ಲೇ ಸುಂಟ್ರಸಿಕೊಂಡು ಬೀಳುತ್ತಿರಲು ಅದೇ ಹೊತ್ತಿಗೆ ಪಕ್ಕದ ವಪ್ಪಾರಿನಿಂದ ಎಮ್ಮೆಯ ಕೂಗು ಅದರ ಹಿಂದೆ ಅದರ ಕರುವಿನ ಕೂಗು ಮಾರ್ದನಿಸಿದವು. 'ಅಯ್ಯೋ, ನನ್ ತಾಯಿ ನಾನೆಂಥಾ ಕೇಡಾಳಿ ನೋಡು, ನಿಮ್ಮನ್ನ ನೆಪ್ಪೇ ಮಾಡ್ಕಳ್ಳಿಲ್ವಲ್ಲ.' ಸಂಪಕ್ಕಜ್ಜಿಯ ಬಿಕ್ಕಳಿಕೆಗಳೊಳಗಿಂದ ಮಾತುಗಳು ಮೂಡಿದವು. ಕೂತಲ್ಲಿಂದಲೇ ತಡಕಿ ತಲೆದಿಂಬಿನ